# ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು

ನಂ.ನಅಪ್ರಾತು/ಯೋ/ಏಕ ನಿವೇಶನ/80/ನಕ್ಷೆ ದೃಢೀಕರಣ/2010-11 /3584 ದಿನಾಂಕ : 5/3/2014

## ವಿನ್ಯಾಸ ಮಂಜೂರಾತಿ ಆದೇಶ

**ವಿಷಯ :** ತುಮಕೂರು ನಗರದ **ಗೆದ್ದಲಹಳ್ಳಿ** ಗ್ರಾಮದ ಸರ್ವೆ ನಂಬರ್ **22/2** ರಲ್ಲಿ ವಿಸ್ತೀರ್ಣ **0-01.72 ಗುಂಟೆ** ಪ್ರದೇಶಕ್ಕೆ **ಶ್ರೀ ನೂರ್‌ಜಾನ್ ಅಮ್ಮ** ಇವರ ಪರವಾಗಿ **ವಾಸದ** ಉಪಯೋಗಕ್ಕೆ ಏಕ ನಿವೇಶನ ವಿನ್ಯಾಸ ಅನುಮೋದನೆ ಕೋರಿರುವ ಬಗ್ಗೆ.

**ಉಲ್ಲೇಖ :**
1. ಅರ್ಜಿದಾರರ ಅರ್ಜಿ ದಿನಾಂಕ **28-09-2010.**
2. ಜಿಲ್ಲಾಧಿಕಾರಿಗಳ ಕಾರ್ಯಾಲಯದ ಆದೇಶ ಸಂಖ್ಯೆ ಎಎಲ್‌ಎನ್ / ಎಸ್‌ಆರ್ / 100 / 2002-03 ದಿನಾಂಕ 07-01-2003
3. ಪರಿಶೀಲನಾ ಶುಲ್ಕ, ಉತ್ತಮತೆ ಶುಲ್ಕ, ಸ್ಲಂಸೆಸ್ ಶುಲ್ಕ ಹಾಗೂ ಅಭಿವೃದ್ಧಿ ಶುಲ್ಕ ಪಾವತಿಸಿದ ದಿನಾಂಕ **11-01-2011** ರಸೀತಿ ಸಂಖ್ಯೆ **20758 ರೂ.40,063-00** (ನಲವತ್ತು ಸಾವಿರದ ಅರವತ್ತ ಮೂರು ರೂಪಾಯಿಗಳು ಮಾತ್ರ)
4. ದಿನಾಂಕ **08-11-2010** ರಂದು ನಡೆದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ **05** ರ ನಿರ್ಣಯ.

* * * * *

ವಿಷಯಕ್ಕೆ ಸಂಬಂದಿಸಿದಂತೆ, ಉಲ್ಲೇಖ (1) ನಿಮ್ಮ ಕೋರಿಕೆಯನ್ನು ಪರಿಶೀಲಿಸಿದೆ. ತುಮಕೂರು ನಗರದ **ಗೆದ್ದಲಹಳ್ಳಿ** ಗ್ರಾಮದ ಸರ್ವೆ ನಂಬರ್ **22/2** ರಲ್ಲಿ ವಿಸ್ತೀರ್ಣ **0-01.72 ಗುಂಟೆ** ಪ್ರದೇಶಕ್ಕೆ ಉಲ್ಲೇಖ (2) ರ ಆದೇಶದಂತೆ ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಕಾಯ್ದೆ 1961 ರ ಅಧಿನಿಯಮ 17 ರ ಉಪವಿಧಿ (1) ರ ಪ್ರಕಾರ 1963 ಕರ್ನಾಟಕ ಕಾಯ್ದೆಯನ್ವಯ ಉಲ್ಲೇಖ (4) ರ ಸಭೆಯ ನಿರ್ಣಯದಂತೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಏಕ ನಿವೇಶನ **ವಾಸದ** ವಿನ್ಯಾಸ ನಕ್ಷೆಯನ್ನು ಅನುಮೋದಿಸಿದೆ.

**ಷರತ್ತುಗಳು:-**

1. ಪ್ರಸ್ತಾವಿತ ಪ್ರದೇಶವನ್ನು **ವಾಸದ** ಉದ್ದೇಶದ ಏಕ ನಿವೇಶನ ವಿನ್ಯಾಸವಾಗಿ ಅನುಮೋದಿಸಲಾಗಿದ್ದು, ಈ ನಿವೇಶನವನ್ನು ಉಪವಿಭಾಗ ಮಾಡುವುದಾಗಲಿ, ನಿವೇಶನ ಅಳತೆಯನ್ನು ಮಾರ್ಪಾಡು ಮಾಡುವುದಾಗಲಿ ಮಾಡಕೂಡದು. ಒಂದು ವೇಳೆ ನಿವೇಶನವನ್ನು ಉಪವಿಭಜಿಸಬೇಕಾಗಿದ್ದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17 ರಂತೆ ಈ ಕಛೇರಿಯ ಪೂರ್ವಾನುಮತಿ ಪಡೆಯತಕ್ಕದ್ದು.
2. ಕಟ್ಟಡ ಇತ್ಯಾದಿ ಕಾಮಗಾರಿಯನ್ನು ಕೈಗೊಳ್ಳುವ ಮುನ್ನಾ ಸಂಬಂಧಿಸಿದ ಸ್ಥಳೀಯ ಸಂಸ್ಥೆಯಿಂದ ಕ್ರಮ ಬದ್ಧ ಪರವಾನಗಿ (ಲೈಸೆನ್ಸ್) ಯನ್ನು ಪಡೆಯತಕ್ಕದ್ದು.
3. ಸಿವಿಲ್ ವ್ಯಾಜ್ಯಗಳಿಗೆ, ತಪ್ಪು ಮಾಹಿತಿ / ದಾಖಲೆಗಳಿಗೆ ಪ್ರಾಧಿಕಾರವು ಜಾವಾಬ್ದಾರಿಯಲ್ಲ.
4. ರಸ್ತೆಯು ಮಂಜೂರಾಗಿರುವ ಪ್ರಕಾರ ಕನಿಷ್ಠ **150** ಅಡಿ ಅಗಲವಿರುವಂತೆ ನೋಡಿಕೊಳ್ಳಬೇಕು. ಆದುದರಿಂದ ರಸ್ತೆ ಮದ್ಯದಿಂದ **75** ಅಡಿ ಅಗಲದ ನಂತರ ಕಾಂಪೌಡ್ ಕಟ್ಟಬೇಕು.

ಮೇಲೆ ತಿಳಿಸಿದ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದ್ದಾಗಲಿ ಅಥವಾ ಈ ಅನುಮೋದನೆ ಸಂಬಂಧ ನೀಡಲಾದ ದಾಖಲಾತಿ / ಮಾಹಿತಿ ತಪ್ಪು ಎಂದು ಕಂಡು ಬಂದಲ್ಲಿ ಈಗ ನೀಡಲಾದ ಅನುಮತಿಯು ತಾನೇ ತಾನಾಗಿ ರದ್ದಾಗುತ್ತದೆ ಎಂದು ಭಾವಿಸತಕ್ಕದ್ದು.

ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ,
ತುಮಕೂರು.

**ಶ್ರೀಮತಿ ನೂರ್‌ಜಾನ್ ಅಮ್ಮ**
ಕೋಂ ಖಲಂದರ್ ಖಾನ್
ಮತ್ತು ಅಸ್ಲಂಖಾನ್
ಗೆದ್ದಲಹಳ್ಳಿ
ತುಮಕೂರು.

**ಪ್ರತಿಯನ್ನು :-**
ಆಯುಕ್ತರು, ಮಹಾನಗರ ಪಾಲಿಕೆ, ತುಮಕೂರು ರವರಿಗೆ ಮುಂದಿನ ಕ್ರಮಕ್ಕಾಗಿ ರವಾನಿಸಲಾಗಿದೆ.







KEY-PLAN
NOT-TO-SCALE

PROPOSED LAY-OUT BOUNDRY. EXTENT OF 0A-01.75 GUNT




SCALE=1:500

GOVERNMENT OF KARNATAKA
TUMKUR URBAN DEVELOPMENT AUTHORITY
TUMKUR

| | |
|---|---|
| TOWN PLANNING MEMBER<br>TUDA<br>TUMKUR | COMMISSIONER<br>TUDA<br>TUMKUR |

| | | |
|---|---|---|
| TCD BY: | CHD BY: | DNG NO: |

TITTLE: PROPOSED SINGLE PLOT RESIDENTIAL LAY-OUT PLAN IN SY. NO. 22:2. EXTENT OF 0A-01.75 GUNTA AT GEDDALAHALLI VILLAGE. KASBA HOBLI, TUMKUR TALUK, TUMKUR DISTRICT. APPLICANT: SMT NOORJAN AMMA.